**<u>ಆರ್.ಎ. ನಂಃ 37/2023</u>**
**ಪಿಡಬ್ಲ್ಯು - 1 ಜಗದೀಶ ಕುಬಸದ**

**<u>ಸಾಕ್ಷಿಯನ್ನು ದಿನಾಂಕಃ 29.01.2026 ರಂದು ಕರೆಯಿಸಿ, ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲುಃ ಎದುರುದಾರ ನಂ. 1 ರಿಂದ 6, 8, 7(ಎ) ಮತ್ತು (ಡಿ) ರವರ ಪರವಾಗಿ ಶ್ರೀ ಪಿ.ಕೆ.ಯು. ವಕೀಲರಿಂದಃ</u>**

1. ನಿಪಿ - 19 ರಿಂದ 22 ಪೊಟೋಗಳನ್ನು ನಾನೇ ನನ್ನ ಮೊಬೈಲನಲ್ಲಿ ತೆಗೆದು ಪ್ರಿಂಟ್ ಹಾಕಿಸಿರುತ್ತೇನೆ. ದಿನಾಂಕ ನೆನಪಿಲ್ಲ. ಈ ಪೊಟೋಗಳನ್ನು ನಾನು ವಿಚಾರಣಾ ನ್ಯಾಯಾಲಯದಲ್ಲಿ ಕೇಸು ಇದ್ದಾಗಲೇ ತೆಗೆಸಿದ ಪೊಟೋಗಳು ಆಗಿರುತ್ತವೆ. ಸದರಿ ಪೊಟೋಗಳನ್ನು ನನ್ನ ಮೊಬೈಲನಲ್ಲಿ ತೆಗೆದಿರುತ್ತೇನೆ ಎಂದು ಯಾವುದೇ ಸರ್ಟಿಪಿಕೇಟ್ ನೀಡಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಮೊಬೈಲನಲ್ಲಿಯೇ ಪೊಟೋಗಳನ್ನು ತೆಗೆದಿದ್ದರೂ ಸಹ ಆ ಪೊಟೋಗಳನ್ನು ಕಿರಣ ಡಿಜಿಟಲ್ ಪೊಟೋ ಸ್ಟುಡಿಯೋದವರು ಕ್ಯಾಮರಾದಲ್ಲಿ ತೆಗೆದು, ಅವುಗಳನ್ನು ಯತಾವತ್ತಾಗಿ ಕಂಪ್ಯೂಟರನಲ್ಲಿ ಡೌನಲೋಡ ಮಾಡಿಕೊಂಡು ನಂತರ ಲ್ಯಾಬನಿಂದ ಪ್ರಿಂಟ್ ತೆಗೆದಿರುತ್ತಾರೆ ಎಂದು ನಿಪಿ - 24 ರಂತೆ ಸರ್ಟಿಪಿಕೇಟನ್ನು ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

2. ಸದರಿ ಸರ್ಟಿಪಿಕೇಟನ ಸಂಗತಿಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಸದರಿ ನಿಪಿ - 24 ಕೊಟ್ಟಿರುವ ಡಿಜಿಟಲ್ ಸ್ಟುಡಿಯೋದವರನ್ನು ವಿಚಾರಣೆಗೆ ಒಳಪಡಿಸುತ್ತೇನೆ. ವಿಚಾರಣಾ ನ್ಯಾಯಾಲಯದಲ್ಲಿ ಕೇಸು ಇದ್ದಾಗಲೇ ಪೊಟೋ ತೆಗೆಯಿಸಿದ್ದ ಕಾರಣ ಅವುಗಳನ್ನು ಅಲ್ಲಿ ಹಾಜರು ಪಡಿಸಲು ಯಾವುದೇ ಪ್ರಯತ್ನ ಮಾಡಿಲ್ಲ ಎಂದರೆ ಸಾಕ್ಷಿಯು ಕೇಸು ನಡೆಸುತ್ತಿದ್ದ ವಕೀಲರು ತೀರಿಕೊಂಡರು ಅವರ ಕಚೇರಿಯ ಜೂನಿಯರ ವಕೀಲರಿಗೆ ಕೊಟ್ಟಿದ್ದೆ ಅವರನ್ನು ಹಾಜರು ಪಡಿಸಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಎದುರುದಾರರು ಪೊಟೋಗಳನ್ನು ವಿಚಾರಣಾ ನ್ಯಾಯಾಲಯದಲ್ಲಿ ಹಾಜರು ಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಗಳು ಅಸಲು ದಾವಾ ನಂಬರ 157/2014 ರಲ್ಲಿ ನಿಡಿ-1 ರಿಂದ 5 ಹಾಗೂ ಅಸಲು ದಾವಾ ನಂಬರ 80/2014 ರಲ್ಲಿ ಅವುಗಳ ದೃಡಿಕೃತ ನಕಲುಗಳು ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ.

3. ದಾವಾ ಆಸ್ತಿಗೆ ಸಂಬಂಧಪಟ್ಟ ಪೊಟೋಗಳು ಈಗಾಗಲೇ ಕಡತದ ಮೇಲೆ ಇದ್ದರೂ ಸಹ ಅಫೀಲನಲ್ಲಿ ವಿಳಂಬ ಉಂಟು ಮಾಡುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿಸಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನೇ ನನ್ನ ಮೊಬೈಲನಲ್ಲಿ ತೆಗೆದು ಅವುಗಳನ್ನು ಪೊಟೋ ಸ್ಟುಡಿಯೋಗೆ ಹೋಗಿ ಯತವತ್ತಾಗಿ ಪ್ರಿಂಟ್ ತೆಗೆಸಿರುತ್ತೇನೆ ಎಂದು ನನ್ನ ಅರ್ಜಿ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ. ನಾನು ಹಾಜರು ಪಡಿಸಿದ ನಿಪಿ -19 ರಿಂದ 24 ದಾಖಲೆಗಳನ್ನು ಈ ಕೇಸಿಗೆ ಸಂಬಂಧಪಡದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾಖಲೆಗಳು ಹೆಚ್ಚುವರಿ ಸಾಕ್ಷ ಎಂದು ತೋರಿಸಲು ಯಾವುದೇ ಸಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತಲೇಖನದಂತೆ, ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಅದೆ.

**-sd-**
ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ.